# ನ್ಯಾಯದರ್ಶನದಲ್ಲಿ 'ಅಪವರ್ಗ' ನಿರೂಪಣೆ

ವಿದ್ವಾನ್ ಅನಂತಶರ್ಮಾ ಭುವನಗಿರಿ

**ನ್ಯಾಯದರ್ಶನವು, ತತ್ತ್ವಗಳ ಅರಿವಿನ ಮೂಲಕ, ದೋಷನಿವಾರಣೆಯನ್ನು ಮಾಡಿಕೊಳ್ಳಬೇಕು; ಆ ಮೂಲಕ ಮಿಥ್ಯಾಜ್ಞಾನವನ್ನು ನಿವಾರಿಸಿಕೊಂಡು 'ಅಪವರ್ಗ' ಅಥವಾ 'ಮೋಕ್ಷ'ವನ್ನು ಸಂಪಾದಿಸಿಕೊಳ್ಳಬೇಕು ಎಂದು ಬೋಧಿಸುತ್ತದೆ, ಇದರ ಸರಳ ಪರಿಚಯವನ್ನು ಮಾಡಿಕೊಟ್ಟಿರುವ ಮಾನ್ಯ ಲೇಖಕರು ಬೆಂಗಳೂರಿನ ನಿವಾಸಿಗಳು; ವೇದಾಂತ ಮತ್ತಿತರ ಪ್ರಾಚ್ಯವಿದ್ಯಾ ವಿಭಾಗಗಳಲ್ಲಿ ಅಪಾರ ಪಾಂಡಿತ್ಯವನ್ನು ಪಡೆದವರು.**

**ನ್ಯಾ**ಯದರ್ಶನವು ವೈದಿಕದರ್ಶನಗಳೆಂದು ಪ್ರಸಿದ್ಧವಾದ ಆರು ದರ್ಶನಗಳಲ್ಲಿ ಒಂದಾಗಿದೆ. ಈ ದರ್ಶನದ ಮೂಲಗ್ರಂಥವಾದ 'ನ್ಯಾಯಸೂತ್ರ'ಗಳನ್ನು ರಚಿಸಿದವರು **ಅಕ್ಷಪಾದರು**. ಇವರಿಗೆ **ಗೌತಮ** ಎಂದು ಇನ್ನೊಂದು ಹೆಸರೂ ಇದೆ. ಇವರ ಕಾಲದ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಇವರು ಕ್ರಿ.ಶ. ಐದನೆಯ ಶತಮಾನಕ್ಕಿಂತ ಈಚಿನವರಲ್ಲ ಎಂಬುದು ಬಹುಜನರಿಗೆ ಸಮ್ಮತವಾದ ವಿಷಯ. ಈ ನ್ಯಾಯಸೂತ್ರಗಳಿಗೆ ವಾತ್ಸ್ಯಾಯನರೆಂಬುವವರು ಭಾಷ್ಯವನ್ನು ರಚಿಸಿದ್ದಾರೆ. ತದನಂತರ ಈ ಶಾಸ್ತ್ರವು ವಿಪುಲವಾದ ಬೆಳವಣಿಗೆಯನ್ನು ಕಂಡಿದೆ.

## ನ್ಯಾಯಶಾಸ್ತ್ರದ ಉದ್ದೇಶ

ಮಾನವನ ಪರಮಪುರುಷಾರ್ಥ ಯಾವುದೆಂಬುದನ್ನು ನಿಶ್ಚಯಿಸಿಕೊಟ್ಟು ಅದನ್ನು ಸಾಧಿಸಲು ಮಾರ್ಗದರ್ಶನ ಮಾಡುವುದೇ ಎಲ್ಲ ದರ್ಶನಗಳ ಮುಖ್ಯೋದ್ದೇಶ. ನ್ಯಾಯದರ್ಶನವೂ ಇದೇ ದಾರಿಯಲ್ಲಿ ಸಾಗಿ 'ಅಪವರ್ಗ'ವನ್ನೇ ಮಾನವಜೀವನದ ಮುಖ್ಯ ಗುರಿಯನ್ನಾಗಿ ತೋರಿಸುತ್ತದೆ. ಇತರ ದರ್ಶನಗಳಲ್ಲಿ ಸಾಮಾನ್ಯವಾಗಿ ಮುಕ್ತಿ, ಮೋಕ್ಷ ಎಂದು ಹೇಳುವುದನ್ನೇ ಈ ದರ್ಶನವು 'ನಿಃಶ್ರೇಯಸ್', 'ಅಪವರ್ಗ' ಎಂದು ಕರೆದಿದೆ. ನ್ಯಾಯದರ್ಶನದ ಮೊದಲನೆಯ ಸೂತ್ರದಲ್ಲಿ ಪ್ರಮಾಣ–ಪ್ರಮೇಯ ಮುಂತಾದ ಹದಿನಾರು ಪದಾರ್ಥಗಳ ತತ್ತ್ವವನ್ನು ತಿಳಿದರೆ ನಿಃಶ್ರೇಯಸ್ಸು ದೊರಕುತ್ತದೆ ಎಂದು ಹೇಳಲಾಗಿದೆ. ಎರಡನೆಯ ಸೂತ್ರದಲ್ಲಿ ತತ್ತ್ವಜ್ಞಾನವು ನಿಃಶ್ರೇಯಸ್ಸನ್ನು ದೊರಕಿಸಿಕೊಡುವ ಮಾರ್ಗವನ್ನು ಹೇಳುವಾಗ, **ಅಪವರ್ಗ** ಎಂಬ ಪದವನ್ನು ಉಪಯೋಗಿಸಿದೆ. **ದುಃಖ–ಜನ್ಮ–ಪ್ರವೃತ್ತಿ–ದೋಷ–ಮಿಥ್ಯಾಜ್ಞಾನಾನಾಮ್ ಉತ್ತರೋತ್ತರ ಅಪಾಯೇ ತದನಂತರ ಅಪಾಯಾದ್ ಅಪವರ್ಗಃ** ಎನ್ನುತ್ತದೆ ಆ ಸೂತ್ರ. ದುಃಖ, ಜನ್ಮ, ಪ್ರವೃತ್ತಿ, ದೋಷ ಮತ್ತು ಮಿಥ್ಯಾಜ್ಞಾನ – ಇವುಗಳಲ್ಲಿ ಮುಂದುಮುಂದಿನದು ಹೋದರೆ ಅದರ ಹಿಂದುಹಿಂದಿನದು ಕಳೆದು ಅಪವರ್ಗ ದೊರಕುತ್ತದೆ ಎಂಬುದು ಈ ಸೂತ್ರದ ತಾತ್ಪರ್ಯ. ಇದರ ಅರ್ಥ ಹೀಗಿದೆ: ಮಿಥ್ಯಾಜ್ಞಾನ ನಾಶವಾದರೆ ದೋಷ ನಾಶವಾಗುತ್ತದೆ. ಅದರಿಂದ ಕರ್ಮದಲ್ಲಿ ಪ್ರವೃತ್ತಿಯಿಲ್ಲದಾಗುತ್ತದೆ. ಆಮೇಲೆ ಜನ್ಮವಿಲ್ಲದಂತಾಗುತ್ತದೆ. ಜನ್ಮವಿಲ್ಲದ್ದರಿಂದ ದುಃಖವೂ ಇಲ್ಲ. ಹೀಗೆ ಎಲ್ಲಕ್ಕೂ ಮೂಲವಾದುದು ಮಿಥ್ಯಾಜ್ಞಾನ. ಅದು ನಾಶವಾಗಬೇಕು. ಇದೇ ನ್ಯಾಯಶಾಸ್ತ್ರದ ಉದ್ದೇಶ.

ಈ ಮಾರ್ಗವನ್ನು ನ್ಯಾಯಶಾಸ್ತ್ರವು ವಿವರಿಸುವ ಬಗೆ ಹೀಗಿದೆ: ಈ ಜಗತ್ತಿನಲ್ಲಿ ಜನ್ಮತಾಳಿದ ಪ್ರತಿಯೊಬ್ಬ ಜೀವಿಯೂ ಹುಟ್ಟಿದಂದಿನಿಂದ ಸಾಯುವವರೆಗೂ ಒಂದಲ್ಲ ಒಂದು ದುಃಖದಿಂದ ಪೀಡಿತನಾಗಿಯೇ ಇರುತ್ತಾನೆ. ಸಮುದ್ರದಲ್ಲಿ ಅಲೆಗಳು ಬರುವಂತೆ ದುಃಖಗಳು ಬರುತ್ತಲೇ ಇರುತ್ತವೆ. ಸುಖವು ಇಲ್ಲವೇ ಇಲ್ಲವೆಂದಲ್ಲ. ಅಮಾವಾಸ್ಯೆಯ ಕಗ್ಗತ್ತಲಿನಲ್ಲಿ ಮಿಂಚೊಂದು ಮಿಂಚಿದಂತೆ ಆಗೊಮ್ಮೆ ಈಗೊಮ್ಮೆ ಸುಖವು ಭಾಸವಾದರೂ ಪುನಃ ದುಃಖದ ಕಗ್ಗತ್ತಲೆ ಆವರಿಸಿಕೊಂಡುಬಿಡುತ್ತದೆ. ಜೀವನದಲ್ಲಿ ದುಃಖದ ಪ್ರಾಬಲ್ಯವನ್ನು ಕಂಡ ವಿವೇಕಿಯು (ಪೂರ್ವಾರ್ಜಿತ ಸತ್ಕರ್ಮಗಳಿಂದ ಅಂಥ ವಿವೇಕವನ್ನು ಗಳಿಸಿಕೊಂಡವನು) ವೈರಾಗ್ಯಹೊಂದಿ ಈ ದುಃಖ ಮತ್ತೆಂದೂ ಮರಳಿಬಾರದಂತೆ ಕಳೆದುಕೊಳ್ಳಲು ಪ್ರಯತ್ನಿಸುತ್ತಾನೆ. ಇಂಥ ಆತ್ಯಂತಿಕ ದುಃಖನಾಶವನ್ನೇ ನ್ಯಾಯಶಾಸ್ತ್ರದಲ್ಲಿ 'ಅಪವರ್ಗ'ವೆಂದು ಕರೆಯಲಾಗಿದೆ. ಬೇರೆಯ ದರ್ಶನಗಳಂತೆ. ನ್ಯಾಯಶಾಸ್ತ್ರದ ಪ್ರಕಾರ, ಮೋಕ್ಷದಲ್ಲಿ ಆನಂದದ ಗಳಿಕೆ ಇಲ್ಲ. ಬಹುಕಾಲದಿಂದ ಭಾರವನ್ನು ಹೊತ್ತು ಬಳಲಿದವನೊಬ್ಬನು ಆ ಭಾರವನ್ನು ಇಳಿಸಿ ಈಗ ಸುಖವಾಯಿತು ಎನ್ನುವಂತೆ, ದುಃಖವನ್ನು ಕಳೆದುಕೊಳ್ಳುವುದೇ ಸುಖವನ್ನು ಪಡೆದಂತೆ ಆಗುತ್ತದೆ, ಅಷ್ಟೇ.

## ದುಃಖನಿವಾರಣೆ

ಆದರೆ ದುಃಖವನ್ನು ಕಳೆದುಕೊಳ್ಳುವುದಾದರೂ ಹೇಗೆ? ಜನ್ಮತಾಳಿದ ಪ್ರತಿಯೊಂದು ಜೀವಿಗೂ ದುಃಖವಿದ್ದೇ ಇದೆ ಎಂಬುದನ್ನು ನೋಡಿದೆವು. ರೋಗರುಜಿನಾದಿಗಳಿಂದ ಶರೀರಕ್ಕೆ ಆಗುವ ಬಾಧೆ, ಸಾಂಸಾರಿಕ ಕಷ್ಟಗಳಿಂದ ಉಂಟಾಗುವ ಮಾನಸಿಕ ಪೀಡೆ, ಪ್ರಾಕೃತಿಕ ಉತ್ಪಾತಗಳಿಂದಾಗುವ ಆಧಿಭೌತಿಕ ದುಃಖ – ಹೀಗೆ ದುಃಖಗಳ ಪರಂಪರೆಯೇ ಇರುತ್ತದೆ. ಇವೆಲ್ಲವೂ ಶರೀರಸಂಬಂಧದಿಂದಾಗಿಯೇ ಉಂಟಾಗುತ್ತದೆ. ಶರೀರವಿದ್ದರೇ ಈ ದುಃಖಗಳನ್ನು ಶರೀರವು ಪಡೆಯುವುದು. ಹೀಗಾಗಿ ಜನ್ಮತಾಳುವುದೇ ಈ ಎಲ್ಲ ದುಃಖಗಳ ದ್ವಾರವನ್ನು ತೆರೆದಂತೆ. ಹುಟ್ಟದೇ ಇರುವವನಿಗೆ ದುಃಖಗಳೇ ಇಲ್ಲ. ಆದ್ದರಿಂದ ದುಃಖದಿಂದ ತಪ್ಪಿಸಿಕೊಳ್ಳಬೇಕಾದರೆ ಜನ್ಮದಿಂದ ತಪ್ಪಿಸಿಕೊಳ್ಳಬೇಕು.

ಜನ್ಮಕ್ಕೆ ಕಾರಣ ಜೀವಿಯ ಧರ್ಮಾಧರ್ಮಗಳು. ಪುಣ್ಯಪಾಪಗಳೆಂಬುದು ಇವುಗಳ ಮತ್ತೊಂದು ಹೆಸರು. ಕೇವಲ ಪುಣ್ಯವನ್ನು ಗಳಿಸಿದ್ದಲ್ಲಿ ದೇವತಾಜನ್ಮ; ಪಾಪವೇ ತುಂಬಿಕೊಂಡಿದ್ದಲ್ಲಿ ನಾರಕಜನ್ಮ ಅಥವಾ ಪಶುಪಕ್ಷಿ ಮುಂತಾದ ಹುಟ್ಟುಗಳು; ಪುಣ್ಯಪಾಪಗಳೆರಡೂ ಮಿಶ್ರವಾಗಿದ್ದಲ್ಲಿ ಮನುಷ್ಯಜನ್ಮ – ಹೀಗೆಂದು

ಶಾಸ್ತ್ರ ಹಾಗೂ ಸಂಪ್ರದಾಯಗಳಿಂದ ತಿಳಿದುಬರುತ್ತದೆ. ಆದ್ದರಿಂದ ಪುಣ್ಯಪಾಪಗಳೆರಡೂ ಪ್ರೇತ್ಯಭಾವಕ್ಕೆ ಅಂದರೆ ಪುನರ್ಜನ್ಮಕ್ಕೆ ಕಾರಣ ವಾಗುತ್ತವೆ. ಈ ಪುಣ್ಯಪಾಪಗಳನ್ನು 'ಅದೃಷ್ಟ' ವೆನ್ನುತ್ತಾರೆ. ಇದನ್ನು ಯಾರೂ ನೋಡಲಾರರು, ಅನುಭವಿಸಲಾರರು.

ನ್ಯಾಯಶಾಸ್ತ್ರದ ಪ್ರಕಾರ ಈ ಅದೃಷ್ಟವು ಆತ್ಮನ ಒಂದು ಗುಣ. ಇದು ಆತ್ಮನನ್ನು ಆಶ್ರಯಿಸಿಕೊಂಡು ಇರುತ್ತದೆ. ಈ ಜನ್ಮದಲ್ಲಿ ಜೀವಿಯು ಅನುಭವಿಸುವ ಎಲ್ಲ ಸುಖದುಃಖಗಳಿಗೂ, ಅವನು ಹಿಂದಿನ ಜನ್ಮದಲ್ಲಿ ಗಳಿಸಿದ ಪುಣ್ಯಪಾಪಗಳೇ ಕಾರಣ. ಜೀವಿಯು ಅನುಭವಿಸುವ ಫಲಗಳ ಮೇಲೆ ಅವನು ಪುಣ್ಯವಂತನೋ ಪಾಪಿಯೋ ಎಂಬುದು ನಿರ್ಧಾರಿತವಾಗುತ್ತದೆ. ಈ ಪುಣ್ಯಪಾಪಗಳೇ ಜೀವಿಗೆ ಮುಂದಿನ ಜನ್ಮವನ್ನು ನೀಡುವುದು. ಆದ್ದರಿಂದ ಜನ್ಮವನ್ನು ತಪ್ಪಿಸಿಕೊಳ್ಳಬೇಕಾದರೆ ಪುಣ್ಯಪಾಪಗಳು ಉಂಟಾಗದಂತೆ ನೋಡಿಕೊಳ್ಳಬೇಕು. ಪುಣ್ಯಪಾಪಗಳುಂಟಾಗುವುದೇ ಜೀವಿಯ ಪ್ರವೃತ್ತಿಯಿಂದಾಗಿ. **ಪ್ರವೃತ್ತಿಃ ವಾಗ್‌ಬುದ್ಧಿಶರೀರಾರಂಭಾ** ಎನ್ನುತ್ತದೆ ನ್ಯಾಯಸೂತ್ರ. ಅಂದರೆ ವಾಕ್ಕು, ಮನಸ್ಸು, ಶರೀರ ಇವುಗಳ ಚಟುವಟಿಕೆಯನ್ನೇ ಪ್ರವೃತ್ತಿಯೆನ್ನುವುದು. ಮನೋವಾಕ್ಕಾಯಗಳಿಂದ ಮಾಡುವ ಕ್ರಿಯೆಗಳೆಲ್ಲ ಪ್ರವೃತ್ತಿಗಳು ಎಂದು ಇದರ ಅರ್ಥ. ಶಾಸ್ತ್ರವಿಹಿತವಾದ ಪ್ರವೃತ್ತಿಯಿಂದ ಪುಣ್ಯವೂ, ಶಾಸ್ತ್ರನಿಷಿದ್ಧವಾದ ಪ್ರವೃತ್ತಿಯಿಂದ ಪಾಪವೂ ಉಂಟಾಗುತ್ತದೆ. ಈ ಪಾಪಪುಣ್ಯಗಳ ಫಲವನ್ನು ಅನುಭವಿಸುವುದಕ್ಕಾಗಿ, ಜೀವಿಯು ಪುನರ್ಜನ್ಮವನ್ನು ಪಡೆಯುತ್ತಾನೆ. ಆ ಜನ್ಮದಲ್ಲಿ ಅವನು ನಡೆಸಿದ ಪ್ರವೃತ್ತಿಯಿಂದಾಗಿ ಮುಂದಿನ ಜನ್ಮ – ಹೀಗೆ ಆತನ ಜನ್ಮಮರಣಗಳ ಪ್ರವಾಹ ಮುಂದುವರಿಯುತ್ತದೆ. ಇದರಿಂದ ತಪ್ಪಿಸಿಕೊಳ್ಳಬೇಕಾದರೆ ಪ್ರವೃತ್ತಿಗೇ ಕಡಿವಾಣ ಹಾಕಬೇಕು.

## ದೋಷನಿವಾರಣೆ

ಮುಂದಿನ ಜನ್ಮವನ್ನು ಪಡೆದುಕೊಳ್ಳುವುದೇ ದುಃಖಕ್ಕೆ ಕಾರಣ ವಾಗುವುದೆಂದು ಗೊತ್ತಿದ್ದರೂ, ಜೀವಿಯು ಪುಣ್ಯ ಹಾಗೂ ಪಾಪ ಕರ್ಮಗಳಲ್ಲಿ ಏಕೆ ಪ್ರವೃತ್ತನಾಗುತ್ತಾನೆ? ಇದಕ್ಕೆ ನ್ಯಾಯಶಾಸ್ತ್ರದಲ್ಲಿ ನೀಡುವ ಕಾರಣ 'ದೋಷ' ಎಂದು. '**ಪ್ರವರ್ತನಾಲಕ್ಷಣಾ ದೋಷಾಃ**' – ಪ್ರವೃತ್ತಿಗೆ ಕಾರಣವಾದುವುಗಳೇ ದೋಷಗಳು. ಈ ದೋಷಗಳು ಅನೇಕವಾಗಿದ್ದರೂ ಇವುಗಳನ್ನು ಮುಖ್ಯವಾಗಿ ಮೂರೆಂದು ಪರಿಗಣಿಸುತ್ತಾರೆ. ರಾಗ, ದ್ವೇಷ, ಮೋಹಗಳೇ ಆ ಮೂರು ಮುಖ್ಯ ದೋಷಗಳು. ಕಾಮ, ಮತ್ಸರ, ಸ್ಪೃಹಾ, ತೃಷ್ಣಾ, ಲೋಭ ಇವೆಲ್ಲ ರಾಗದ ಗುಂಪಿಗೆ ಸೇರಿದವುಗಳು. ಕ್ರೋಧ, ಈರ್ಷೆ, ಅಸೂಯೆ, ದ್ರೋಹ, ಅಮರ್ಷ (ಅಸಹನೆ) ಇವೆಲ್ಲ ದ್ವೇಷದ ಗುಂಪಿಗೆ ಸೇರಿದವು. ಇದೇ ರೀತಿ ಮೋಹವೂ ಅನೇಕ ಬಗೆಯಾಗಿದೆ. ತಪ್ಪುತಿಳಿವಳಿಕೆ, ಸಂಶಯ, ಇಲ್ಲದ ಗುಣಗಳನ್ನೆಲ್ಲ ತನ್ನಲ್ಲಿ ಆರೋಪಿಸಿಕೊಂಡು ಹೆಮ್ಮೆಪಟ್ಟುಕೊಳ್ಳುವಿಕೆ, ಕರ್ತವ್ಯವನ್ನು ಮಾಡದೇ ಇರುವುದು – ಇವೆಲ್ಲ ಮೋಹವೇ.

ಹೀಗೆ ದೋಷಗಳು ಮುಖ್ಯವಾಗಿ ಮೂರು ಭಾಗಗಳಾಗಿ ವಿಭಾಗಿಸಲ್ಪಟ್ಟಿದ್ದರೂ ಇವುಗಳಲ್ಲಿ ಮೋಹವೇ ಅತ್ಯಂತ ಕೆಡುಕಾದದ್ದು. ಮೋಹದಿಂದಲೇ ಇತರ ದೋಷಗಳಾದ ರಾಗದ್ವೇಷಗಳು ಹುಟ್ಟುತ್ತವೆ; ಮೋಹದಿಂದಾಗಿಯೇ ಜೀವಿಗೆ ಕೆಲವು ವಸ್ತುಗಳ ಮೇಲೆ ಅತೀವ ಮಮತೆ, ಪ್ರೀತಿ, ಅದು ಸದಾ ತನ್ನೊಡನೆ ಇರಬೇಕೆಂಬ ಬಯಕೆ ಮೂಡುತ್ತವೆ; ಮತ್ತೆ ಕೆಲವು ವಸ್ತುಗಳ ಮೇಲೆ ದ್ವೇಷ, ಆ ವಸ್ತುಗಳನ್ನು ದೂರವಿಡಬೇಕೆಂಬ ಬುದ್ಧಿ ಇವೆಲ್ಲ ಉಂಟಾಗುತ್ತವೆ. ಈ ರಾಗದ್ವೇಷಗಳು ಜನ್ಮಾಂತರ ಸಂಸ್ಕಾರದಿಂದಲೇ ಬಂದಿರುತ್ತವೆ. ಈ ಜನ್ಮದಲ್ಲಿ ಸಿಕ್ಕುವ ಕೆಟ್ಟ ಸಂಸ್ಕಾರದಿಂದ ಅವು ಹೆಚ್ಚುತ್ತವೆ. ಉತ್ತಮ ಸಂಸ್ಕಾರ ಸಿಕ್ಕಿದಾಗ ಕ್ಷೀಣಿಸುತ್ತವೆ. ಅಜ್ಞಾನದಿಂದಾಗಿಯೇ ಈ ಎಲ್ಲ ದೋಷಗಳು ಕಾಣಿಸಿಕೊಳ್ಳುವುದರಿಂದ ಜ್ಞಾನದಿಂದ ಅಜ್ಞಾನವನ್ನು ನಾಶಮಾಡಿಕೊಳ್ಳುವುದೊಂದೇ ಈ ಸಂಸ್ಕಾರಗಳಿಂದ ತಪ್ಪಿಸಿಕೊಳ್ಳುವ ಉಪಾಯ.

## ಆತ್ಮಜ್ಞಾನ

ಒಂದು ವಿಷಯದ ಬಗ್ಗೆ ನಮಗಿರುವ ಅಜ್ಞಾನವು ತೊಲಗ ಬೇಕಾದರೆ ಅದೇ ವಿಷಯದ ಜ್ಞಾನ ನಮಗುಂಟಾಗಬೇಕು. ಇಲ್ಲಿ ಆತ್ಮನ ಬಗ್ಗೆ ನಮಗಿರುವ ಅಜ್ಞಾನವೇ ದುಃಖಕ್ಕೆ ಕಾರಣ. ಆತ್ಮನ ಬಗ್ಗೆ ನಮಗೆ ಅಜ್ಞಾನವಿದೆ ಮಾತ್ರವಲ್ಲ, ಅನಾತ್ಮಗಳಾದ ಶರೀರ ಇಂದ್ರಿಯ ಮೊದಲಾದುವುಗಳೇ ಆತ್ಮ ಎಂಬ ಮಿಥ್ಯಾಜ್ಞಾನವೂ ಇದೆ. ಆದ್ದರಿಂದಲೇ ಶರೀರಾದಿಗಳ ಮೇಲೆ ನಾನು, ನನ್ನದು ಎಂಬ ಭಾವ, ಅದರ ಪಾಲನೆಪೋಷಣೆಗಳಲ್ಲಿ ಆಸಕ್ತಿ, ಅದಕ್ಕೆ ನೋವುಂಟಾದಲ್ಲಿ ದುಃಖ, ಅದು ನಾಶವಾದೀತೇನೋ ಎಂಬ ಭಯ, ಮತ್ತೆ ಮತ್ತೆ ಆ ಶರೀರವನ್ನು ಹೊಂದುವ ಆಸೆ – ಹೀಗೆ ಶರೀರ ಇಂದ್ರಿಯಗಳ ಮೇಲಿನ ಅಹಂಕಾರ ಮಮಕಾರಗಳೇ ಸರ್ವ ಅನರ್ಥಗಳಿಗೂ ಕಾರಣ. ತತ್ತ್ವಜ್ಞಾನದಿಂದ ಮಾತ್ರ ಈ ಬಗೆಯ ಮಿಥ್ಯಾಜ್ಞಾನದ ನಾಶ ಸಾಧ್ಯ.

ನ್ಯಾಯಶಾಸ್ತ್ರದಲ್ಲಿ ವಿವರಿಸಿದ **ಪ್ರಮಾಣ** (ತಿಳಿದುಕೊಳ್ಳುವ ಸಾಧನಗಳು), **ಪ್ರಮೇಯ** (ತಿಳಿದುಕೊಳ್ಳಬೇಕಾದ ತತ್ತ್ವಗಳು) ಮುಂತಾದ ಹದಿನಾರು ತತ್ತ್ವಗಳನ್ನು ಸಂದೇಹಾತೀತವಾಗಿ ಅರಿತರೆ ನಿಃಶ್ರೇಯಸ್ಸು ಅಥವಾ ಅಪವರ್ಗವೆಂದು ಹೇಳಿದರೂ, ಮುಖ್ಯವಾಗಿ ಆತ್ಮನನ್ನು ಕುರಿತಾದ ಅಜ್ಞಾನ ತೊಲಗಬೇಕೆನ್ನುವುದಕ್ಕೇ ಇಲ್ಲಿ ಹೆಚ್ಚು ಒತ್ತುಕೊಡಲಾಗಿದೆ. ಆತ್ಮನು ಶರೀರ ಇಂದ್ರಿಯ ಮನಸ್ಸು ಇವುಗಳಿಂದ ಅತ್ಯಂತ ಭಿನ್ನವೆಂಬ ನಿಶ್ಚಯಜ್ಞಾನ ಆವಶ್ಯಕ. ಅಂಥ ಜ್ಞಾನವನ್ನು ಗಳಿಸಬೇಕಾದರೆ ಯೋಗ್ಯಗುರುಗಳಲ್ಲಿ ಆತ್ಮವಿದ್ಯಾಶಾಸ್ತ್ರವನ್ನು ಅಧ್ಯಯನ ಮಾಡಬೇಕು. ಆ ಶಾಸ್ತ್ರವನ್ನು ಬಲ್ಲವರೊಡನೆ ಸಂವಾದವನ್ನು ನಡೆಸಿ ಸಂಶಯವನ್ನು ಪರಿಹರಿಸಿಕೊಳ್ಳಬೇಕು. ಯೋಗಶಾಸ್ತ್ರದಲ್ಲಿ ಹೇಳಿದಂತೆ ಅರಣ್ಯ, ಗುಹೆ, ನದೀತೀರ ಮುಂತಾದ ಏಕಾಂತ ಪ್ರದೇಶಗಳಲ್ಲಿ ನೆಲೆಸಿ, ಯೋಗಾಭ್ಯಾಸದ ಮೂಲಕ ತತ್ತ್ವಜ್ಞಾನವನ್ನು ಪಡೆಯಬೇಕು.

ಈ ರೀತಿ ಮುಮುಕ್ಷುವು ಆತ್ಮತತ್ತ್ವಜ್ಞಾನದಿಂದ ಮಿಥ್ಯಾಜ್ಞಾನವನ್ನು ಕಳೆದುಕೊಳ್ಳುತ್ತಾನೆ. ಮಿಥ್ಯಾಜ್ಞಾನ ಕಳೆದಾಗ ರಾಗ ದ್ವೇಷ ಮೋಹಗಳೆಂಬ ದೋಷಗಳು ತಾವಾಗಿಯೇ ದೂರವಾಗುತ್ತವೆ. ದೋಷರಹಿತನಾದ ಜೀವಿಗೆ ಪುಣ್ಯ ಹಾಗೂ ಪಾಪಕರ್ಮಗಳಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ. ಕರ್ಮವಿಲ್ಲದ್ದರಿಂದ ಮುಂದಿನ ಜನ್ಮವಿಲ್ಲ. ಜನ್ಮವಿಲ್ಲದಾಗ ದುಃಖವೂ ಇಲ್ಲ. ದುಃಖವಿಲ್ಲದ ಸ್ಥಿತಿಯಾದ ಅಪವರ್ಗವನ್ನು ಆತ ಪಡೆಯುತ್ತಾನೆ. ಇದೇ ನಿಃಶ್ರೇಯಸ್ಸು, ಇದೇ ಮೋಕ್ಷ. ★



ಅಭ್ಯುದಯ ನಿಃಶ್ರೇಯಸಗಳನ್ನು ತಂದುಕೊಡುವುದೇ ಧರ್ಮ. ವೈಶೇಷಿಕ ದರ್ಶನದಲ್ಲಿ ಧರ್ಮಮಾರ್ಗವನ್ನು ಪಾಂಡಿತ್ಯಪೂರ್ಣವಾಗಿ ವಿವರಿಸಿರುವ ಮಾನ್ಯ ಲೇಖಕರು ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದಲ್ಲಿ ಪ್ರಾಧ್ಯಾಪಕರು; ಶಾಸ್ತ್ರಗಳಲ್ಲಿ ಅಗಾಧ ಪಾಂಡಿತ್ಯವುಳ್ಳವರು.

ಡಾ. ಅನಂತ ನಾಗೇಂದ್ರಭಟ್ಟ

# ವೈಶೇಷಿಕ ದರ್ಶನದಲ್ಲಿ 'ಧರ್ಮ'

**ದ**ರ್ಶನವೆಂದರೆ ತತ್ತ್ವಮಾರ್ಗವೆಂದರ್ಥ. ಇದರಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾದ ಸಮಸ್ತ ವಸ್ತುಗಳ ವಿಭಜನೆಯನ್ನು ಮಾಡಲಾಗುತ್ತದೆ ಹಾಗೂ ಇಹಪರಗಳ ಅಭಿವೃದ್ಧಿಯ ಮಾರ್ಗಗಳನ್ನು ಬೋಧಿಸಲಾಗುತ್ತದೆ. ತತ್ತ್ವವಿವೇಚನೆಯ ಶಾಸ್ತ್ರಗಳು ಭರತಭೂಮಿಯಲ್ಲಿ ಪ್ರಧಾನವಾಗಿ ಎರಡು ಬಗೆಯಾಗಿವೆ: ಒಂದನೆಯದು ವೇದವನ್ನಾಧರಿಸಿ ತತ್ತ್ವಗಳನ್ನು ಪ್ರತಿಪಾದಿಸುವ ದರ್ಶನಗಳಾದರೆ, ಇನ್ನೊಂದು ಸ್ವತಂತ್ರವಾಗಿ ತತ್ತ್ವಗಳನ್ನು ಪ್ರತಿಪಾದಿಸುವ ದರ್ಶನಗಳು. ಮೊದಲನೆಯ ಗುಂಪಿನಲ್ಲಿ ನ್ಯಾಯ, ವೈಶೇಷಿಕ, ವೇದಾಂತ, ಸಾಂಖ್ಯ, ಯೋಗ ಮತ್ತು ಮೀಮಾಂಸಗಳೆಂದು ಪ್ರಮುಖವಾಗಿ ಆರು ಬಗೆ. ಎರಡನೆಯ ಗುಂಪಿನಲ್ಲಿ ಚಾರ್ವಾಕ, ಬೌದ್ಧ ಮತ್ತು ಜೈನಗಳೆಂಬ ಮೂರು ದರ್ಶನಗಳು ಪ್ರಸಿದ್ಧವಾಗಿವೆ. ಈ ಎಲ್ಲ ದರ್ಶನಗಳೂ ಹಿಂದೂದರ್ಶನಗಳೇ ಆಗಿವೆ.

ವೈಶೇಷಿಕ ದರ್ಶನವನ್ನು 'ಪ್ರಮೇಯಶಾಸ್ತ್ರ' ಎನ್ನಲಾಗಿದೆ. ಇಲ್ಲಿ ಪ್ರಮೇಯಗಳೇ ಪ್ರಧಾನವಾದ ವಿಷಯಗಳು. ಅಂದರೆ, ವಿಶ್ವದಲ್ಲಿ ಕಂಡುಬರುವ ಸಮಸ್ತ ವಸ್ತುಗಳನ್ನೂ ಹಾಗೂ ವಿಷಯಗಳನ್ನು ವಿಭಾಗಿಸಿ ತಿಳಿಸುವ ಶಾಸ್ತ್ರವೆಂದು ಸಾಮಾನ್ಯವಾಗಿ ಹೇಳಬಹುದು. ಈ ದರ್ಶನಕ್ಕೆ **ವೈಶೇಷಿಕ ಸೂತ್ರ**ಗಳೇ ಆಧಾರ. ಇವು ಔಲೂಕ್ಯ ಅಥವಾ ಕಣಾದ ಮಹರ್ಷಿಗಳಿಂದ ರಚಿತವಾಗಿದೆ. ಈ ಸೂತ್ರಗಳಿಗೆ ಪ್ರಶಸ್ತಪಾದರು ಭಾಷ್ಯವನ್ನು ಬರೆದಿರುತ್ತಾರೆ. ಈ ಸೂತ್ರಗಳಿಗೆ **ರಾವಣಭಾಷ್ಯ** ಮತ್ತು **ಭರದ್ವಾಜವೃತ್ತಿ** ಎಂಬ ವ್ಯಾಖ್ಯಾನಗಳೂ ಇವೆಯೆಂದು ತಿಳಿದುಬಂದಿದೆ. ರಾವಣಭಾಷ್ಯಕ್ಕೆ ವ್ಯೋಮಶೇಖರ ಆಚಾರ್ಯನಿಂದ ರಚಿತವಾದ **ವ್ಯೋಮವತೀ** ಎಂಬ ವ್ಯಾಖ್ಯಾನವಿದೆ. ಪ್ರಶಸ್ತಪಾದಭಾಷ್ಯಕ್ಕೆ ಶ್ರೀಧರನು **ನ್ಯಾಯ ಕಂದಲೀ** ಎಂಬ ವ್ಯಾಖ್ಯಾನವನ್ನು ಬರೆದಿರುತ್ತಾನೆ. ಉದಯನನು **ಕಿರಣಾವಲೀ** ಎಂಬ ವ್ಯಾಖ್ಯಾನವನ್ನೂ ಶ್ರೀವತ್ಸಾಚಾರ್ಯನು **ಲೀಲಾವತೀ** ಎಂಬ ವ್ಯಾಖ್ಯಾನವನ್ನೂ ರಚಿಸಿದ್ದಾರೆ. ಪ್ರಶಸ್ತಪಾದ ಭಾಷ್ಯಕ್ಕೆ ಶಂಕರಮಿಶ್ರನ **ಕಣಾದರಹಸ್ಯ** ಎಂಬ ವ್ಯಾಖ್ಯಾನ ಮತ್ತು ಜಗದೀಶ ಭಟ್ಟಾಚಾರ್ಯನ **ಭಾಷ್ಯಸೂಕ್ತಿ** ಎಂಬ ವ್ಯಾಖ್ಯಾನ ಇವೆ.

## ವೈಶೇಷಿಕ ಪದದ ನಿರ್ವಚನ

ಈ ದರ್ಶನದಲ್ಲಿ ಕಣಾದಮಹರ್ಷಿಗಳು 'ವಿಶೇಷ' ಎಂಬ ಪದಾರ್ಥವನ್ನು ಅಂಗೀಕರಿಸಿರುವುದರಿಂದ 'ವೈಶೇಷಿಕ ದರ್ಶನ' ಎಂಬ ಹೆಸರು ಬಂದಿರಬಹುದೆಂದು ಆಧುನಿಕ ವಿಮರ್ಶಕರು ಹೇಳುತ್ತಾರೆ. ಕಣಾದ ಎಂದರೆ ಪರಮಾಣುಗಳ ಭೇದಸಾಧನೆಯಲ್ಲಿ ಆನಂದವನ್ನು ಅನುಭವಿಸಿದವರು ('ಕಣ' ಎಂದರೆ ಪರಮಾಣು, 'ಆದ' ಎಂದರೆ ಆನಂದವನ್ನನುಭವಿಸಿದ) ಎಂಬರ್ಥವನ್ನು ಕೆಲವು ವಿದ್ವಾಂಸರು ನಿರ್ವಚನ ಮಾಡಿದ್ದಾರೆ. 'ವಿಶೇಷ'ಕ್ಕೆ ಪ್ರಾಧಾನ್ಯ ಕೊಡುವ ತಾತ್ತ್ವಿಕರು ವೈಶೇಷಿಕರು. ವಿಶ್ವವು ಅನೇಕಾನೇಕ ವೈಶಿಷ್ಟ್ಯವುಳ್ಳ ವಿಷಯಗಳಿಂದ ಕೂಡಿದೆ. ಹೊರಪ್ರಪಂಚದ ಈ ವಿಷಯಗಳಿಗೆ ಅಣುಗಳು ಆಧಾರ. ಆಧ್ಯಾತ್ಮಿಕ ಪ್ರಪಂಚದ ಅನೇಕಾನೇಕ ಅನುಭವಗಳಿಗೆ ಆತ್ಮಗಳು ಆಧಾರ. ಅಸ್ತಿತ್ವ ಒಂದೇ ಅಲ್ಲ, ಅನೇಕ. ಈ ಅನೇಕತೆಯಿಂದ ಕೂಡಿದ ಈ ಅಸ್ತಿತ್ವದ ಅಂತಿಮ ವಿಶೇಷಗಳನ್ನು ಕಂಡುಹಿಡಿಯಲು ವೈಶೇಷಿಕರು ವಿಭಜನೆಯ ವಿಧಾನವನ್ನು ಉಪಯೋಗಿಸಿದ್ದಾರೆ. ನಾವು ನೋಡುವ ಬೆಟ್ಟ, ಪಕ್ಷಿ, ಗಿಡ ಮುಂತಾದವು ಸಂಯೋಜಿತ ಪದಾರ್ಥಗಳು. ಅಂದರೆ ಅನೇಕ ಸರಳ ಬಿಡಿ ಬಿಡಿ ವಸ್ತುಗಳಿಂದ ಕೂಡಿದವು. ಅಸ್ತಿತ್ವದ ಅಂತಿಮ ಸ್ವರೂಪವನ್ನು ತಿಳಿಯಲು, ಇನ್ನು ವಿಭಜಿಸಲಾಗದ ವಿಶೇಷಗಳನ್ನು ತಲುಪುವವರೆಗೆ ಸಂಯುಕ್ತ ವಿಷಯಗಳನ್ನು ವಿಭಜಿಸುತ್ತಾ ಹೋಗಬೇಕು. ಇದೇ ವೈಶೇಷಿಕರ

ತಾತ್ತ್ವಿಕ ವಿಧಾನ. ಈ ಬಗೆಯ ವಿಧಾನವನ್ನು ಉಪಯೋಗಿಸಿ ಅವರು ಇಡೀ ಜಗತ್ತು ಏಳು ಅಂತಿಮ ಪದಾರ್ಥಗಳಿಂದ ಆಗಿದೆ ಎಂದು ಕಂಡುಹಿಡಿದರು.

### 'ಧರ್ಮ' ಪದದ ಸಾಮಾನ್ಯ ಅರ್ಥ

**ಅಥಾತೋ ಧರ್ಮಂ ವ್ಯಾಖ್ಯಾಸ್ಯಾಮಃ** – ಕಣಾದರು ತಮ್ಮ ಮೊದಲನೆಯ ಸೂತ್ರದಲ್ಲಿ ಧರ್ಮವನ್ನು ನಿರೂಪಿಸಲಾಗುವುದು ಎಂದು ಪ್ರಾರಂಭಿಸಿದ್ದಾರೆ. ಎರಡನೆಯ ಸೂತ್ರದಲ್ಲಿ ಧರ್ಮ–ಅರ್ಥ ಕಾಮಗಳೆಂಬ ಅಭ್ಯುದಯವೂ, ಮೋಕ್ಷ ಎಂಬ ನಿಃಶ್ರೇಯಸವೂ ಸದಾಚಾರದಿಂದ ಸಿದ್ಧಿಸುತ್ತವೆ ಎಂದು ಹೇಳುತ್ತಾರೆ. **ಯತಃ ಅಭ್ಯುದಯ ನಿಃಶ್ರೇಯಸ ಸಿದ್ಧಿಃ ಸ ಧರ್ಮಃ** – ಆಮೇಲೆ, ಯಾವುದ ರಿಂದ ಸುಖರೂಪವಾದ ಅಭ್ಯುದಯ ಮತ್ತು ದುಃಖನಿವೃತ್ತಿ ರೂಪವಾದ ಮೋಕ್ಷ ಸಿದ್ಧಿಸುವುದೋ ಅದೇ ಧರ್ಮ ಎಂದು ವಿವರಿಸುತ್ತಾರೆ.

**ಅಭ್ಯುದಯ**ವೆಂದರೆ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿ ಎಂದೂ, **ನಿಃಶ್ರೇಯಸ**ವೆಂದರೆ ಮುಕ್ತಿ ಅಥವಾ ಮೋಕ್ಷವೆಂದೂ ತಿಳಿಯಬೇಕು. ಅಭ್ಯುದಯ ಮತ್ತು ನಿಃಶ್ರೇಯಸ್ಸುಗಳಿಗೆ ತಳಹದಿ ಯಾದ ಆಚರಣೆಗಳು ಪ್ರಧಾನವಾಗಿ ಧೃತಿ, ಕ್ಷಮಾ, ದಮ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ಧೀ, ವಿದ್ಯಾ, ಸತ್ಯ, ಅಕ್ರೋಧ ಎಂಬುದಾಗಿ ಹತ್ತು ವಿಧವಾಗಿದೆ.

**ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮ್ ಇಂದ್ರಿಯನಿಗ್ರಹಃ ।**
**ಧೀರ್ವಿದ್ಯಾ ಸತ್ಯಮಕ್ರೋಧೋ ದಶದಂ ಧರ್ಮಲಕ್ಷಣಮ್ ॥**

(ಮನುಸ್ಮೃತಿ)

ಇಲ್ಲಿ **ಧೃತಿ** ಎಂದರೆ ಧೈರ್ಯ, ಉತ್ಸಾಹ, ಪ್ರೀತಿ, ಆಸ್ಥೆ, ಧಾರಣೆ ಮೊದಲಾದವುಗಳು. **ಕ್ಷಮಾ** ಎಂದರೆ ಸಹನೆ ಅಥವಾ ತಾಳ್ಮೆ. **ದಮ**ವೆಂದರೆ ಬಹಿರಿಂದ್ರಿಯಗಳ ನಿಗ್ರಹ. **ಅಸ್ತೇಯ**ವೆಂದರೆ ಪರರ ಸ್ವತ್ತಿಗೆ ಆಸೆಪಡದಿರುವುದು. **ಶೌಚ**ವೆಂದರೆ ಹೊರಗಿನ ಮತ್ತು ಒಳಗಿನ ಶುಚಿತ್ವವನ್ನು ಕಾಪಾಡಿಕೊಳ್ಳುವುದು. **ಇಂದ್ರಿಯನಿಗ್ರಹ**ವೆಂದರೆ ಅಂತರಿಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು. **ಧೀ** ಎಂದರೆ ಬುದ್ಧಿ. ಅದನ್ನು ಸೂಕ್ತವಾಗಿ ಬಳಸಿಕೊಳ್ಳುವುದು. **ಸತ್ಯ**ವೆಂದರೆ ಯಥಾರ್ಥವಾದ ನುಡಿ–ನಡೆಗಳಿಂದ ಜೀವಿಸುವುದು. **ವಿದ್ಯಾ** ಎಂದರೆ ವೇದಾದಿ ಅಷ್ಟಾದಶ (ಹದಿನೆಂಟು) ವಿದ್ಯೆಗಳ ಅಧ್ಯಯನ. **ಅಕ್ರೋಧ** ಎಂದರೆ ಕೋಪಗೊಳ್ಳದಿರುವುದು. ಈ ದಶವಿಧವಾದ ಧರ್ಮಸಾಧನಗಳನ್ನು ಸಾಮಾನ್ಯವಾಗಿ ಎಲ್ಲ ದಾರ್ಶನಿಕರೂ ಅಂಗೀಕರಿಸಿದ್ದಾರೆ. ಆದರೆ ವಿದ್ಯೆಯನ್ನು ಬೇರೆ ಬೇರೆ ದರ್ಶನಗಳಲ್ಲಿ ಭಿನ್ನಭಿನ್ನವಾಗಿ ವಿವರಿಸಿದ್ದಾರೆ.

### ಅಧರ್ಮ

ಜೀವಿಯು ಪಾಪಕರ್ಮಗಳಿಂದ ಜನಿಸಿದವನಾಗಿದ್ದು, ಅವನು ಪರಿಪಕ್ವನಾಗಿರುವುದಿಲ್ಲ. ಅವನಲ್ಲಿ ಅಜ್ಞಾನವು ತುಂಬಿರುತ್ತದೆ. ಇಂತಹ ಅಜ್ಞಾನದಿಂದ ಬಗೆಬಗೆಯ ಮಿಥ್ಯಾಜ್ಞಾನವು ಉಂಟಾಗುತ್ತದೆ. ಮಿಥ್ಯಾಜ್ಞಾನದಿಂದ ಅನುಕೂಲಕರವಾದ ವಿಷಯಗಳಲ್ಲಿ ದ್ವೇಷವೂ, ಆ ಮೂಲಕ ಅಸೂಯೆ, ಮಾಯೆ, ಮೋಹ ಮೊದಲಾದ ದೋಷಗಳೂ ಉದಯಿಸುತ್ತವೆ. ಈ ದೋಷಗಳಿದ್ದಾಗ ಜೀವಿಯು ತನ್ನ ಶರೀರದಿಂದ ಇತರರಿಗೆ ಹಿಂಸೆ, ಚೌರ್ಯ, ದುರಾಚಾರ ಮೊದಲಾದವುಗಳನ್ನೂ, ಮಾತಿನಿಂದ ಅಸತ್ಯ, ಒರಟುತನ, ದೂಷಣೆ, ಅಸಂಬದ್ಧಪ್ರಲಾಪ ಮೊದಲಾದು ವುಗಳನ್ನೂ, ಮನಸ್ಸಿನಿಂದ ಪರದ್ರವ್ಯಾಭಿಲಾಷೆ, ಪರದ್ರೋಹ, ನಾಸ್ತಿಕ್ಯ ಮೊದಲಾದವುಗಳನ್ನೂ ಮಾಡುತ್ತಾನೆ. ಇಂತಹ ಕರ್ಮಗಳಿಂದ ಜೀವಿಯ ಅಭ್ಯುದಯ ಮತ್ತು ಮೋಕ್ಷಗಳು ಸಾಧ್ಯವಾಗಲಾರದು. ಪುಣ್ಯಕರ್ಮಗಳಿಂದ ಮಾತ್ರವೇ ಅಭ್ಯುದಯ–ನಿಃಶ್ರೇಯಸ್ಸುಗಳು ಸಾಧ್ಯವೆಂದು ಶಾಸ್ತ್ರದಲ್ಲಿ ಹೇಳಲಾಗಿದೆ.

### ಧರ್ಮಕ್ಕೆ ಕಾರಣಗಳು

ಧರ್ಮಕ್ಕೆ ಕಾರಣವಾದದ್ದು ಪುಣ್ಯಕರ್ಮಗಳು. ಅವು ಯಾವು ವೆಂದರೆ, ದೇಹಶ್ರಮದಿಂದ ತಾನು ಸಂಪಾದಿಸಿದ್ದನ್ನು ಇತರರಿಗೆ ದಾನಮಾಡುವುದು, ಜೀವಿಗಳ ಕಷ್ಟವನ್ನು ಪರಿಹರಿಸುವುದು, ಯಥಾಶಕ್ತಿ ಲೋಕಸೇವೆಯನ್ನು ಮಾಡುವುದು; ಮಾತಿನ ಮೂಲಕವಾಗಿ ಸತ್ಯವೂ ಹಿತವೂ ಮತ್ತು ಪ್ರಿಯವೂ ಆದ ಮಾತು ಗಳನ್ನಾಡುವುದು ಮತ್ತು ಶಾಸ್ತ್ರಾಭ್ಯಾಸವನ್ನು ಮಾಡುವುದು; ಮನಸ್ಸಿನಲ್ಲಿ ದಯೆ, ವೈರಾಗ್ಯ, ಆಸ್ತಿಕ್ಯಬುದ್ಧಿ ಇರುವುದು ಈ ಹತ್ತು ಗುಣಗಳು ಧರ್ಮಕ್ಕೆ ಕಾರಣಗಳು.

ವೈಶೇಷಿಕ ದರ್ಶನಕಾರರ ಅಭಿಪ್ರಾಯದಲ್ಲಿ ಧರ್ಮಾಧರ್ಮ ಗಳೆಂದರೆ ಸುಖದುಃಖಗಳಿಗೆ ಕಾರಣವಾದ ಅದೃಷ್ಟಗಳು. ಅವು ಶುಭಾಶುಭರೂಪವಾದ ಕರ್ಮಗಳಿಂದ ಹುಟ್ಟುವುವು. ಈ ಕರ್ಮಗಳಿಗೆ **ಪ್ರವೃತ್ತಿ** ಎಂದು ಹೆಸರು. ಇವುಗಳಲ್ಲಿ ಶುಭ ಪ್ರವೃತ್ತಿಗಳಿಂದ ಉತ್ತಮ ಜನ್ಮವೂ, ಅಶುಭ ಪ್ರವೃತ್ತಿಗಳಿಂದ ಅಧಮ ಜನ್ಮವೂ ಉಂಟಾಗುವುದು. ಜನ್ಮವೆಂದರೆ ಆತ್ಮನಿಗೆ ಶರೀರ ಇಂದ್ರಿಯ ಬುದ್ಧಿ ಇವುಗಳ ಸಂಬಂಧ ಎಂದು ತಿಳಿಯಬೇಕು. ಇದರ ಮೂಲಕವಾಗಿ ಆತ್ಮನಿಗೆ ದುಃಖಾನುಭವವುಂಟಾಗುವುದು. ದುಃಖವೆಂದರೆ ಪ್ರತಿಕೂಲ, ಬಾಧೆ ಅಥವಾ ಪೀಡೆ ಎಂದರ್ಥ. **ಮಿಥ್ಯಾಜ್ಞಾನ, ದೋಷ, ಪ್ರವೃತ್ತಿ, ಜನ್ಮ, ದುಃಖ** – ಈ ಐದು ವಿಧವಾದ ಭಾವಗಳು ಜೀವನಿಗೆ ಇರುವ ಸ್ಥಿತಿಯನ್ನು **ಸಂಸಾರ** ವೆಂದು ಕರೆಯುತ್ತಾರೆ. ಸಂಸಾರವನ್ನು ಅವಿದ್ಯಾ, ಕರ್ಮ ಅಥವಾ ವಾಸನಾಚಕ್ರವೆಂದು ಕೆಲವರು ಹೇಳುತ್ತಾರೆ. ಯಾವಾಗ ತತ್ತ್ವಜ್ಞಾನದಿಂದ ಅಜ್ಞಾನವು ಹೋಗುತ್ತದೆಯೋ ಆಗ ಸಂಸಾರವು ನಾಶವಾಗುತ್ತದೆ. ತತ್ತ್ವಜ್ಞಾನವೆಂಬುದು ಮಿಥ್ಯಾಜ್ಞಾನಗಳಿಗೆ ಪ್ರತಿ ಬಂಧಕವಾದ (ವಿರುದ್ಧ) ತಿಳಿವಳಿಕೆ. ತತ್ತ್ವಜ್ಞಾನದಿಂದ ಮುಕ್ತಿಯು ಲಭ್ಯವಾಗುತ್ತದೆ.

### ಮೋಕ್ಷ (ಮುಕ್ತಿ)

ಸರ್ವದುಃಖನಿವೃತ್ತಿಯೇ ಮೋಕ್ಷ. ಈ ಸ್ಥಿತಿಯಲ್ಲಿ ಘೋರವಾದ ಎಲ್ಲ ಕಷ್ಟಗಳೂ ನಿವೃತ್ತಿಯಾಗುತ್ತವೆ. ದುಃಖರೂಪವಾದ ಸಂಸಾರವು ತತ್ತ್ವಜ್ಞಾನಕ್ಕೆ ಪ್ರತಿಬಂಧಕ. ವಿರಕ್ತನಾದ ಆತ್ಮನಿಗೆ ಪುನರ್ಜನ್ಮವನ್ನು ಹೊಂದಲು ಕಾರಣಗಳಿಲ್ಲದಿರುವುದರಿಂದ ದೇಹ ನಾಶವಾದಾಗ ಪುನಃ ಜನ್ಮ ಉಂಟಾಗದೆ ಮೋಕ್ಷವೆಂಬ ಶಾಂತಿಯು ಲಭಿಸುವುದು ಎಂದು ಹೇಳಲಾಗಿದೆ.

ಮೋಕ್ಷದಲ್ಲಿ ಜೀವಾತ್ಮನು ತನ್ನ ಸ್ವಾಭಾವಿಕವಾದ ಸ್ಥಿತಿಯಲ್ಲಿರು ವನು. ಸ್ವಾಭಾವಿಕವಾದ ಸ್ಥಿತಿ ಎಂದರೆ **ವಿಭುತ್ವ** (ಸಮಸ್ತ ಪ್ರಪಂಚವನ್ನೇ ವ್ಯಾಪಿಸಿರುವ ಸ್ಥಿತಿ), **ದ್ರವ್ಯತ್ವ** (ದ್ರವರೂಪವಾದ

ಸ್ಥಿತಿ), **ನಿತ್ಯತ್ವ** (ಸದಾಕಾಲವೂ ಇರುವ ಸ್ಥಿತಿ), **ನಿರವಯವತ್ವ** (ನಿರಾಕಾರವಾಗಿರುವ ಸ್ಥಿತಿ), **ನಾನಾತ್ವ** (ಬಗೆಬಗೆಯಾಗಿರುವ ಸ್ಥಿತಿ) ಮೊದಲಾದ ಧರ್ಮಗಳೊಡನೆ ಸದಾಕಾಲವೂ ದುಃಖವಿಲ್ಲದೇ ಇರುವುದು. ದುಃಖವಿಲ್ಲದಿರುವ ಸ್ಥಿತಿಯೇ ಸ್ವಾಭಾವಿಕವಾದ ಸುಖಾನುಭವವೆಂದು ವೈಶೇಷಿಕ ದರ್ಶನದಲ್ಲಿ ಹೇಳಲಾಗಿದೆ. ಮಿಥ್ಯಾಜ್ಞಾನವೇ ಸಕಲ ಅನರ್ಥಗಳಿಗೂ ಕಾರಣ. ಆದುದರಿಂದ ಮಿಥ್ಯಾಜ್ಞಾನವು ದೂರವಾಗಬೇಕು. ಹಾಗಾಗಬೇಕಾದರೆ ಪದಾರ್ಥಗಳನ್ನು ಪರಾಮರ್ಶನಮಾಡಿ ತಿಳಿದುಕೊಳ್ಳಬೇಕು. ಅದಕ್ಕಾಗಿಯೇ, ಅಂದರೆ, ತತ್ತ್ವಜ್ಞಾನಕ್ಕಾಗಿಯೇ ಈ ದರ್ಶನದಲ್ಲಿ ಪದಾರ್ಥಗಳನ್ನು ವಿಶೇಷವಾಗಿ ಚರ್ಚಿಸಲಾಗಿದೆ.

### ವಿಷಯಗಳ ಪ್ರತಿಪಾದನೆ

ವೈಶೇಷಿಕರು ಬಾಹ್ಯಾರ್ಥಸತ್ತ್ವವಾದಿಗಳು. ಮನುಷ್ಯರ ಸಾಧಾರಣವಾದ ಅನುಭವವನ್ನು ಆಧರಿಸಿ ಈ ದರ್ಶನವು ನಿಂತಿದೆ ಎಂದು ಹೇಳಬಹುದು. 'ಪದಾರ್ಥ' ಎಂದರೆ ಪದದ ಅರ್ಥ. ಈ ದರ್ಶನದಲ್ಲಿ ಪದಾರ್ಥವೆಂಬ ಪದವನ್ನು ಜ್ಞೇಯ ವಿಷಯ ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. ಜ್ಞೇಯ ಎಂದರೆ ತಿಳಿಯಬಹುದಾದ ವಿಷಯ. ಇದಕ್ಕೇ 'ಅರ್ಥ' ಎಂದು ಹೆಸರು. ತಿಳಿಯಬಹುದಾದದ್ದು, ಹೆಸರಿಸಬಹುದಾದದ್ದು – ಇವಕ್ಕೆ **ಪದಾರ್ಥ** ಎಂಬ ಪಾರಿಭಾಷಿಕ ಹೆಸರು. ವೈಶೇಷಿಕರು **ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ** ಎಂಬ ಏಳು ಪದಾರ್ಥಗಳನ್ನು ಪರಿಗಣಿಸುತ್ತಾರೆ

೧.**ದ್ರವ್ಯ:** ಪ್ರಪಂಚದಲ್ಲಿ ನಾವು ನೋಡುವ ಪದಾರ್ಥಗಳಲ್ಲಿ ಅನೇಕ ಗುಣ–ಕರ್ಮಗಳು ಕಾಣಿಸಿಕೊಳ್ಳುತ್ತವೆ. ಇವುಗಳಿಗೆ ಆಧಾರವಾದ **ಭೂಮಿ, ನೀರು, ಬೆಳಕು, ವಾಯು, ಆಕಾಶ, ಕಾಲ, ದಿಕ್ಕು, ಮನಸ್ಸು** ಮತ್ತು **ಆತ್ಮಗಳು** ದ್ರವ್ಯಗಳು.

೨.**ಗುಣ:** ಮಡಕೆ ಮುಂತಾದ ದ್ರವ್ಯಗಳಲ್ಲಿರುವ ರೂಪ, ರಸ, ಸ್ಪರ್ಶ, ಉದ್ದ, ಅಗಲ, ತೂಕ ಮುಂತಾದ ಹೆಚ್ಚು ಸ್ಥಿರವಾದ ಧರ್ಮಗಳೇ ಗುಣಗಳು.

೩.**ಕರ್ಮ:** ಮಡಕೆಯನ್ನು ಅಲ್ಲಾಡಿಸಿದಾಗ ಸ್ವಲ್ಪಹೊತ್ತು ಅಲುಗಾಡುವುದು, ಚಲನ ಮುಂತಾದವು ಕರ್ಮಗಳು. ನಮ್ಮ ಸಾಮಾನ್ಯವಾದ ಅನುಭವದಲ್ಲಿ ಕೂಡ ಬೇರೆ ಬೇರೆ ರೂಪಗಳಿರುವ ವಸ್ತುಗಳು ಬೀಳುವುದು, ಏಳುವುದು, ಓಡುವುದು ಮುಂತಾದವುಗಳ ಮೂಲಕ, ತಮ್ಮ ಸ್ವರೂಪದಿಂದ, ಭಿನ್ನವಾಗಿ ಗೋಚರಿಸುತ್ತವೆ.

### ೪. ಸಾಮಾನ್ಯ

ಹೀಗೆ ಸ್ಥೂಲವಾಗಿ ವಿಚಾರಮಾಡಿದಾಗ ಈ ಬಾಹ್ಯ ಜಗತ್ತು ದ್ರವ್ಯ, ಗುಣ, ಕರ್ಮಗಳೆಂಬ ಮೂರು ಪದಾರ್ಥಗಳ ಸಮುದಾಯರೂಪವಾಗಿದೆ. ಕಣಾದರು ಈ ಮೂರು ವಸ್ತುಗಳನ್ನೇ ಮೂರು ಪದಾರ್ಥಗಳೆಂದು ಹೇಳಿ, ಅವುಗಳ ಅಸ್ತಿತ್ವವು ನೇರವಾಗಿ ನಮ್ಮ ಬುದ್ಧಿಗೆ ಮೊದಲೇ ಗೋಚರಿಸುವುದರಿಂದ ಅವುಗಳಲ್ಲಿಯೇ **ಸತ್ತಾ** (ಸಾಮಾನ್ಯ) ಎಂಬ ಗುಣಧರ್ಮ ಇದೆಯೆಂದು ಹೇಳಿರುತ್ತಾರೆ.

ಪ್ರಪಂಚದಲ್ಲಿ ಅನೇಕ ವಸ್ತುಗಳು ಒಂದೇ ರೀತಿಯಿಂದ ಇರುತ್ತವೆ. ಆದುದರಿಂದ ನಾವು ಅವುಗಳನ್ನು ಒಂದೇ ಶಬ್ದದಿಂದ ವ್ಯವಹರಿಸುತ್ತೇವೆ. ಪ್ರಪಂಚದಲ್ಲಿರುವ ಎಲ್ಲ ಮಡಕೆಗಳನ್ನು 'ಘಟ'ವೆಂಬ ಒಂದೇ ಶಬ್ದದಿಂದ ವ್ಯವಹರಿಸುವುದನ್ನು ನೋಡಿದಾಗ ಈ ಎಲ್ಲ ಧರ್ಮಿಗಳಲ್ಲಿ (ಗುಣ ಹೊಂದಿದ ವಸ್ತುಗಳಲ್ಲಿ) ಅನುಸ್ಯೂತವಾದ ಒಂದೇ ಧರ್ಮವು ಇರಬೇಕೆಂದು ಅನ್ನಿಸುತ್ತದೆ. ಅದೇ **ಸಾಮಾನ್ಯ**. ಇದನ್ನು 'ಜಾತಿ' ಯೆಂದೂ ಕರೆಯುತ್ತಾರೆ. ಇದು ಪದಾರ್ಥಗಳಲ್ಲಿ ಬಾಹ್ಯವಾಗಿ ಇರುವ ಧರ್ಮ. ಇದು ನಿತ್ಯವಾಗಿದ್ದು ಅನೇಕ ವಸ್ತುಗಳಲ್ಲಿ ವ್ಯಾಪಿಸಿದ್ದರೆ ಅದನ್ನು 'ಜಾತಿ' ಯೆಂದು, ಹಾಗಿಲ್ಲದೆ ಕೆಲವೇ ವಸ್ತುಗಳಲ್ಲಿ ವ್ಯಾಪಿಸಿಕೊಂಡಿದ್ದರೆ, ಅದನ್ನು 'ಉಪಾಧಿ' ಯೆಂದೂ ಕರೆಯುತ್ತಾರೆ. ಉದಾಹರಣೆಗೆ ಮನುಷ್ಯತ್ವ (ಮನುಷ್ಯರಾಗಿ ಇರುವುದು) 'ಜಾತಿ'. ಉಪಾಧ್ಯಾಯತ್ವ (ಉಪಾಧ್ಯಾಯರಾಗಿ ಇರುವುದು) 'ಉಪಾಧಿ'.

'ಸಾಮಾನ್ಯ' ವು **ಪರ** ಮತ್ತು **ಅಪರ** ಎಂದು ಎರಡು ವಿಧ. ಹಿಂದೆ ತಿಳಿಸಿದ ದ್ರವ್ಯ, ಗುಣ, ಕರ್ಮಗಳಲ್ಲಿ ಇರುವ **ಸತ್ತಾ** ಎಂಬುದು ಪರಸಾಮಾನ್ಯವಾಗಿದೆ. ಇದನ್ನು ಬಿಟ್ಟರೆ ದ್ರವ್ಯತ್ತ್ವ, ಗುಣತ್ತ್ವ, ಕರ್ಮತ್ತ್ವಗಳು **ಪರಾಪರ** ಸಾಮಾನ್ಯಗಳು. ಏಕೆಂದರೆ, ಅವು ಪೃಥಿವೀತ್ತ್ವ ಮುಂತಾದವುಗಳಿಗಿಂತ ವ್ಯಾಪಕವಾಗಿಯೂ (ಹೆಚ್ಚಿನ ಸ್ಥಳಗಳಲ್ಲಿ ಇರುವವುಗಳು), ಸತ್ತೆಗಿಂತ ವ್ಯಾಪ್ಯವಾಗಿಯೂ (ಕಡಿಮೆ ಸ್ಥಳಗಳಲ್ಲಿರುವವುಗಳು) ಆಗಿವೆ. ಘಟತ್ತ್ವ ಮುಂತಾದ ಸಾಮಾನ್ಯಗಳು ಅಪರ ಸಾಮಾನ್ಯಗಳು.

### ೫. ಪರಮಾಣುಗಳು ಅಥವಾ ವಿಶೇಷ

ಪೃಥ್ವಿ ಮೊದಲಾದ ನಾಲ್ಕು ಭೂತಗಳ ಸೂಕ್ಷ್ಮಾಂಶಗಳನ್ನು ಪರಮಾಣುಗಳೆಂದು ಹೇಳಲಾಗಿದೆ. ಈ ಪರಮಾಣುಗಳಲ್ಲಿ ಒಂದೊಂದೂ ವಿಭಿನ್ನ ವಸ್ತುಗಳಾಗಿದ್ದು, ಇವುಗಳಲ್ಲಿ ಸಮಾನತೆಯೆಂಬುದಿಲ್ಲ. ಆದ್ದರಿಂದ ಪರಮಾಣುಗಳಲ್ಲಿ ಸಾಮಾನ್ಯವಿರುವುದಿಲ್ಲ; ವಿಶೇಷವಿರುತ್ತದೆ. ಘಟ, ಪಟ ಮೊದಲಾದ ಪದಾರ್ಥಗಳಿಗೆ ಅವುಗಳ ಅವಯವಗಳ ಭೇದದಿಂದ ವಿಭಿನ್ನತ್ವವನ್ನು ಹೇಳಲಾಗುತ್ತದೆ. ಪೃಥ್ವಿಯ ಎರಡು ಪರಮಾಣುಗಳಲ್ಲಿ ಪೃಥಿವೀತ್ತ್ವ, ದ್ರವ್ಯತ್ವ ಮುಂತಾದ ಧರ್ಮಗಳು ಸಮಾನವೇ ಆದಾಗ್ಯೂ, ವಿಭಿನ್ನವಾದ ಪರಮಾಣುಗಳಿಂದಾಗಿ ಅವುಗಳು ಸಮಾನವೆಂದೆನಿಸದೆ **'ವಿಶೇಷ'** ಎಂದೆನಿಸುತ್ತವೆ. ಹೀಗೆ ಎರಡು ಸಮಾನವಾದ ಪರಮಾಣುಗಳಲ್ಲಿ 'ವಿಶೇಷ'ವೆಂಬ ಪದಾರ್ಥವನ್ನು ಅಂಗೀಕರಿಸಿ ಅವುಗಳಲ್ಲಿ ಭೇದವನ್ನು ಸಾಧಿಸಲಾಗಿದೆ. ವಿಶೇಷವೆಂಬುದು ಪರಮಾಣುವಾದದಲ್ಲಿ ಸಾಧಿಸಿ ತೋರಿಸಬೇಕಾದ ಮುಖ್ಯವಾದ ಅಂಶ.

### ೬. ಸಮವಾಯ

ಒಂದು ಪದಾರ್ಥವು ಇನ್ನೊಂದು ಪದಾರ್ಥವನ್ನು ಸೇರಿ ಇರುವುದಾದರೆ ಅವೆರಡಕ್ಕೆ 'ಅಯುತಸಿದ್ಧ' ಗಳೆಂದು ಹೆಸರು. ಅಯುತಸಿದ್ಧಗಳಿಗೆ ಇರುವ ಸಂಬಂಧವನ್ನು **ಸಮವಾಯ** ಎಂದು ಕರೆಯುತ್ತಾರೆ. ಸಂಯೋಗವು ದ್ರವ್ಯಗಳಿಗೆ ಮಾತ್ರ. ಸಮವಾಯವು ತಂತು ಮತ್ತು ಬಟ್ಟೆ ಮುಂತಾದ ಅವಯವ ಮತ್ತು ಅವಯವಿಗಳಿಗೂ, ರೂಪ ಮುಂತಾದ ಗುಣಗಳು ಮತ್ತು ಗುಣಿಗಳಿಗೂ (ಗುಣವನ್ನು ಹೊಂದಿರುವಂಥವು), ಚಲನಾದಿ ಕ್ರಿಯೆ ಮತ್ತು ವಸ್ತಗಳಿಗೂ, ಘಟತ್ವಾದಿ ಜಾತಿ ಮತ್ತು ಘಟಗಳಿಗೂ ಇರುತ್ತದೆ.